ಕೊಡುವುದಿಲ್ಲ ಎಂದು ಹೇಳಿರುವುದನ್ನು ನಂಬಲಿಕ್ಕೆ ಸಾಧ್ಯವಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಬೇಕಾದರೆ ಅದೇ ರೀತಿ ನಾವು ಬ್ಯಾಂಕ್ ನವರಿಂದ ಬರೆಸಿಕೊಂಡು ತಮಗೆ ಕೊಡುತ್ತೇವೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ.—ಈಗಾಗಲೇ ನೂರು ಜನ ಹಣ ತುಂಬಿದ್ದಾರೆ. ಕೆಲವು ಬ್ಯಾಂಕ್‌ನವರು ಕೊಡುವುದಕ್ಕೆ ಮನಸ್ಸು ಇಲ್ಲದಿದ್ದರೆ ಇಂಥ ಉತ್ತರಗಳನ್ನು ಕೊಡುತ್ತಾರೆ. ಆ ಉತ್ತರವನ್ನು ಅವಲಂಬಿಸಿ ಪ್ರಶ್ನೆ ಮಾಡಿದರೆ ನಾವು ನಂಬಿಲಕ್ಕೆ ಸಾಧ್ಯವಿಲ್ಲ. ಆದರೆ ಮಾನ್ಯ ಸದಸ್ಯರಿಂಯವರು ಹೇಳಿರುವ ಪ್ರಕಾರ ಅದನ್ನು ವಿಚಾರ ಮಾಡುತ್ತೇವೆ ಮತ್ತು ಅಲಾಟೀಸ್ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳುವುದಿಲ್ಲ.

(೫) ಟ್ಯಾಂಕ್ ಇರುವ ಪಂಚಾಯತಿ ಯವರು ಬೇರೆ ಪಂಚಾಯತಿಗೆ ಸೇರಿದ ಗ್ರಾಮಕ್ಕೆ ನೀರನ್ನು ಕೊಡದೇ ಇರುವುದರ ಬಗ್ಗೆ

ಶ್ರೀ ಸೋಮಪ್ಪ ಸುವರ್ಣ.—ಮಂಡಲ ಪಂಚಾಯಿತಿಗಳನ್ನು ವಿಂಗಡಿಸಿ ಗ್ರಾಮ ಪಂಚಾಯಿತಿಗಳಾಗಿ ಮಾಡಿದ್ದೇವೆ. ಇದರಿಂದ ಸಮಸ್ಯೆ ಏನು ಬಂದಿದೆ ಎಂದರೆ ಒಂದು ಮಂಡಲದಲ್ಲಿರುವಂಥ ನೀರಿನ ಟ್ಯಾಂಕ್‌ನಿಂದ ಇನ್ನೊಂದು ಹೊಸ ಪಂಚಾಯಿತಿ ಗ್ರಾಮಕ್ಕೆ ನೀರು ಹರಿದು ಹೋಗಬೇಕಾಗಿದೆ. ಪಂಚಾಯಿತಿ ವಿಭಾಗವಾದ ಕಾರಣ ನೀರನ್ನು ಹೇಗೆ ಕೊಡುತ್ತಾರೆಂದು ಒಂದು ದೊಡ್ಡ ಸಮಸ್ಯೆ ಇದೆ.

ಉಪಾಧ್ಯಕ್ಷರು.—ಈ ನೀರಿನ ಸಮಸ್ಯೆ ಬಗ್ಗೆ ತಾವು ಗಮನ ಸೆಳೆಯುವ ಸೂಚನೆ ಮೂಲಕ ತೆಗೆದುಕೊಂಡು ಬನ್ನಿ. ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸೋಮಪ್ಪ ಸುವರ್ಣ.—ಟ್ಯಾಂಕ್ ಇರುವ ಪಂಚಾಯಿತಿಯವರು. ಬೇರೆ ಪಂಚಾಯಿತಿಗೆ ಸೇರಿದ ಗ್ರಾಮಕ್ಕೆ ನೀರು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ನೀರು ಸಿಗದಿದ್ದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಶಿಘ್ರವಾಗಿ ಆಲೋಚಿಸಿ ಮುಂಚಿನ ಹಾಗೆಯೇ ನೀರು ದೊರಕಿಸಿ ಕೊಡುವುದಕ್ಕೆ ಏನಾದರೂ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳುತ್ತೇನೆ.

(೬) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಲೆ ಬಾಳುವ ಮರಗಳ ಸಾಗಾಣಿಕೆ

ಶ್ರೀ ಬಿ ಎ ಇದಿನಬ್ಬ.—ಮಾನ್ಯ ಅಧ್ಯಕ್ಷರೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಪ್ರದೇಶದಲ್ಲಿ ಬಹಳ ದೊಡ್ಡ ಬೇಸಂದ ಕೆಲಸ ನಡೆಯುತ್ತಿದೆ. ಸರಹದ್ದಿ ಮತ್ತು ವಿಟ್ಲದ ಹತ್ತಿರ ಚೆಕ್ ಪೋಸ್ಟ್‌ಗಳು ಉಂಟು. ಕರ್ನಾಟಕದ ಗಂಧದ ಮರಗಳು, ಬೀಟೆ, ಮತ್ತು ತೇಗ ಕಳ್ಳತನದಿಂದ ಕೇರಳಾ ರಾಜ್ಯಕ್ಕೆ ಹೋಗುತ್ತಿವೆ. ಯಾರಾದರೂ ಪಾಪದ ಮನೆಗೆ ಸೌದಿ ತೆಗೆದುಕೊಂಡು ಹೋದರೆ ಅವನನ್ನು ಹಿಡಿಯುತ್ತಾರೆ. ಕಳ್ಳತನದಲ್ಲಿ ಹೋಗುವ ದೊಡ್ಡ ಮಾಲನ್ನು ಬಿಟ್ಟುಬಿಡುತ್ತಾರೆ. ಇದರಿಂದ ನಮ್ಮ ರಾಜ್ಯಕ್ಕೆ ಭಾರೀ ನಷ್ಟ. ಇದೆಲ್ಲಾ ಬೇಲಿಯವರಿಗೆ ಗೊತ್ತಾಗುವುದಿಲ್ಲ. ಗಡಿ ಭಾಗದಲ್ಲಿರುವ ನಮಗೆ ಮಾತ್ರ ಇದು ಗೊತ್ತಾಗುತ್ತದೆ. ಉಕ್ಕಡದಲ್ಲಿ ಇದನ್ನೆಲ್ಲಾ ಹಾಗೇ ಬಿಟ್ಟುಬಿಡುತ್ತಾರೆ. ಅದರ ಬಗ್ಗೆ ಮಾನ್ಯ ಅರಣ್ಯ ಮಂತ್ರಿಯವರು ಬಹಳ ಕಠಿಣ ಮತ್ತು ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಕರ್ನಾಟಕ ರಾಜ್ಯಕ್ಕೆ ಬಹಳ ದೊಡ್ಡ ನಷ್ಟವಾಗುತ್ತದೆ. ಇದರಿಂದ ಕರ್ನಾಟಕ ರಾಜ್ಯದ ಸಂಪತ್ತಿನ ನಾಶವಾಗುತ್ತದೆ. ಕರ್ನಾಟಕದಲ್ಲಿ ತೇಗಿನ ಮರ, ಗಂಧದ ಮರ, ತೇಗದ ಮರ ಉಂಟು. ಇದು ಸುಂದರ ನಾಡು, ಚೆಂದದ ನಾಡು. ಅಂದದ ನಾಡು ತೆಂಗಿನ ಕಂಗಿನ, ಬಾಳೆಯ ತೋಟದ ಸುಂದರ ನಾಡಿನಲ್ಲಿ ಕಡೆಗೆ ಸುಂದರ ಮರಗಳು ಉಳಿಯುತ್ತದೆ. ಇದೆಲ್ಲಾ ಹೋದರೆ ಕೊನೆಗೆ ಏನು ಉಳಿಯುತ್ತದೆ ? ಇದರ ಬಗ್ಗೆ ಮಾನ್ಯ ಅರಣ್ಯ ಮಂತ್ರಿಯವರು ಗಮನ ಹರಿಸಿ ದಿನನಿತ್ಯ ಹೋಗತಕ್ಕಂಥ ಮರಗಳನ್ನು ತಪಾಸಣೆಗಾಗಿ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿ.

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಗಡಿ ಪ್ರದೇಶಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ಮಾಡಿ ಕಳ್ಳ ಸಾಣಿಕೆಯನ್ನು ತಡಯಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸಿಬ್ಬಂದಿಗಳಿಗೆ ವಾಕಿ-ಟಾಕಿ ಕೊಟ್ಟಿದ್ದೇವೆ, ಅನೇಕ ಆಧುನಿಕ ಉಪಕರಣಗಳನ್ನು ಒದಗಿಸಿದ್ದೇವೆ. ಅದರ ಜೊತೆಗೆ ವೇಗವಾಗಿ ಹೋಗತಕ್ಕಂಥ ವಾಹನಗಳನ್ನು ಕೊಟ್ಟಿದ್ದೇವೆ. ಆ ಜಾಗದಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇದ್ದರೆ ಆ ಜಾಗಕ್ಕೆ ದಕ್ಷ, ಮತ್ತು ಪ್ರಾಮಾಣಿಕ ಅಧಿಕಾರಿಗಳನ್ನು ಹಾಕಿ ಸ್ಮಗ್ಲಿಂಗ್ ಆಗುವುದನ್ನು ತಡೆಗಟ್ಟುವುದಕ್ಕೆ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುತ್ತೇವೆ.